**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.490/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಡಾಃ ಸುಂದರೇಶ್ | ಪ್ರಾಸಾ-8 |
| ತಂದೆಯ ಹೆಸರು | : ಹೆಚ್.ಎಮ್. ನಿರ್ವಾಣೇಗೌಡ | ಚಾಸಾ-9 |
| ವಯಸ್ಸು | : 52 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಜಿಲ್ಲಾ ಸರ್ವಲೈನ್ಸ್ ಅಧಿಕಾರಿ | ದಿನಾಂಕಃ 19.04.2025. |
| ವಾಸಸ್ಥಳ | : ಚಾಮರಾಜನಗರ | |

**<u>:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:</u>**

ನಾನು ದಿ.07.02.2021 ರಿಂದ ದಿ.15.05.2023 ರವರೆಗೆ ನಾನು ಕಳಸ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಡಳಿತ ವೈದ್ಯಾದಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.27.11.2022 ರಂದು ಸಂಜೆ.7.00 ರ ಸಮಯಕ್ಕೆ ಡಾ.ಮಂಜುನಾಥ್ ಎಂಬುವ ವೈದ್ಯಾಧಿಕಾರಿ ಚಾಸಾ-2 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಪರೀಕ್ಷಿಸಿರುವ ಬಗ್ಗೆ ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ನಮೂದಿಸಿರುತ್ತಾರೆ. ನಂತರ ಸದರಿ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಚಾಸಾ-2 ರವರಿಗೆ ದಂತ ಜೋಡಣೆಯ ಮೂಳೆಯು ಮುರಿದಿರುವುದು ಕಂಡುಬರುತ್ತದೆ ಮತ್ತು ದಂತದ ಮೂಳೆಗೂ ಮತ್ತು ಮೆದುಳಿನ ಮೂಳೆಗೂ ಸಂಪರ್ಕವಿರುವಂತಹ ಮೂಳೆಯೂ ಕೂಡ ಮುರಿದಿರುತ್ತದೆ. ಸದರಿ ಗಾಯಗಳು ತೀರ್ವ ಸ್ವರೂಪದಾಗಿರುತ್ತದೆ. ಚಾಸಾ-2 ರವರನ್ನು ಪರಿಕ್ಷಿಸಿದ ಅಧಿಕಾರಿಯು ಗ್ರಾಮೀಣ ಸೇವಾ ವೈಧ್ಯಾಧಿಕಾರಿಗಳಾಗಿದ್ದು ಅವರ ಸೇವೆ ಕೇವಲ 1 ವರ್ಷ ಗಳಿಗೆ ಸೀಮಿತವಾಗಿದ್ದು ಸದರಿಯವರು ಆ ಕರ್ತವ್ಯದಿಂದ ವಿಮುಕ್ತಿಗೊಂಡಿರುತ್ತಾರೆ. ಸಾಕ್ಷಿಗೆ ಗಾಯ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ-17 ಮತ್ತು ಅವರ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಕಳಸ ಪೋಲಿಸ್ ಅಧಿಕಾರಿಗಳ ಕೋರಿಕೆಯ ಮೇರೆಗೆ ನಾನು ನಿಪಿ-17 ನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಬಿ.ವಿ. ವಕೀಲರಿಂದಃ</u>**

ನಾನು ನೈಜ್ಯ ಘಟನೆಯನ್ನು ನೋಡದೇ ಎಂ.ಎಲ್.ಸಿ ವರದಿಯ ಮೇರೆಗೆ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿ. ಕಳಸ ಪೋಲಿಸ್ ಅಧಿಕಾರಿಗಳು ನಿಪಿ-17 ನ್ನು ಕೋರಿ ನೀಡಿದ ಮನವಿ ಪತ್ರವನ್ನು ಈ ನ್ಯಾಯಾಲಯದ ಮುಂದೆ ಹಾಜರು ಮಾಡಿರುವುದಿಲ್ಲ. ನಾನು ಮೇಲೆ ಹೇಳಿರುವ ದಂತ ಮೂಳೆಗೆ ಆಗಿರುವಂತ ಗಾಯವು ಸಾಮಾನ್ಯವಾಗಿ ಅಪಘಾತ ಸಂಭವಿಸಿದಾಗ ಮತ್ತು ಎತ್ತರದ ಪ್ರದೇಶದಿಂದ ಕೆಳಗೆ ಬಿದ್ದರು ಸಂಬವಿಸಬಹುದು ಎಂದರೆ ಸರಿ. ದಿ.27.11.2022 ರಂದು ಡಾ.ಮಂಜುನಾಥ್ ರವರು ತಾಮಸ್ ಎಂಬ ವ್ಯಕ್ತಿಯನ್ನು ತಪಾಸಣೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ವರದಿ ನೀಡಿರುವಂತೆ ತಾಮಸ್ ರವರಿಗೆ ಯಾವುದೇ ಮೂಳೆ ಮುರಿತಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸ್ ಅಧಿಕಾರಿಗಳು ಯಾವುದೇ ಮನವಿ ಪತ್ರವನ್ನು ನೀಡಿದಿದ್ದರೂ ಅವರಿಗೆ ಅನುಕೂಲ ಮಾಡಿ ಕೊಡಲು ನಿಪಿ-17 ನ್ನು ನೀಡಿರುತ್ತೇನೆ

ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.